ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ
ವ್ಯಾವೃತ್ತಾಸ್ವನುವರ್ತಮಾನಮಹಮಿತ್ಯಂತಸ್ಫುರಂತಂ ಸದಾ ।
ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ
ಯೋ ಮುದ್ರಯಾ ಭದ್ರಯಾ
ತಸ್ಮೈ ಶ್ರೀಗುರುಮೂರ್ತಯೇ
ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ (೭)

"ಬಾಲ್ಯ ಯೌವನ ಮುಪ್ಪುಗಳು, ಜಾಗ್ರತ್ ಸ್ವಪ್ನ ನಿದ್ರಾದಿಗಳು ಮತ್ತು ಇತರ ಎಲ್ಲ ಅವಸ್ಥೆಗಳು ಬಂದುಹೋದರೂ, ನಿತ್ಯವಾಗಿ ಉಳಿದುಕೊಂಡಿರುವ ಮತ್ತು 'ನಾನು' ಎಂದು ಅಂತರಂಗದಲ್ಲಿ ಸದಾ ಪ್ರಕಾಶಿಸುತ್ತಿರುವ ಆತ್ಮನನ್ನು ಯಾವಾತನು ತನ್ನ ಮಂಗಳವಾದ ಮುದ್ರೆಯಿಂದ ಶಿಷ್ಯರಿಗೆ ಪ್ರಕಟಿಸುವನೊ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ."

ನಾವು ಯಾವುದೇ ವಿಷಯವನ್ನೂ ಇಲ್ಲವೆಂದು ನಿರಾಕರಿಸಬಹುದು. ಬೌದ್ಧಶೂನ್ಯವಾದಿಗಳು ಎಲ್ಲ ಬಗೆಯ ಸತ್ಯವನ್ನೂ ನಿರಾಕರಿಸುತ್ತಾರೆ. ಅವರ ಪಾಲಿಗೆ ಕೇವಲ ಬದಲಾವಣೆಯೊಂದೇ ಇರುವಂತಹದು, ಅದರ ಹಿಂದೆ ಯಾವ ಸತ್ಯವೂ ಇಲ್ಲ. ನಿರ್ವಾಣವೆಂದರೆ, ದೀಪ ಆರಿಹೋದಂತೆ, ಇಲ್ಲವಾಗುವುದು. ಶ್ರೀಶಂಕರಾಚಾರ್ಯರು ಇದನ್ನು ಒಪ್ಪುವುದಿಲ್ಲ. **ಸರ್ವಬುದ್ಧೀನಾಂ ಮೃಷಾತ್ವೇ ಅಸತ್ಯಬುದ್ಧಿರಪಿ ಅನುಪಪತ್ತೇಃ** – "ಎಲ್ಲವನ್ನೂ ನಿರಾಕರಿಸಿದರೆ, ಆ ನಿರಾಕರಣಬುದ್ಧಿಯನ್ನೂ ನಿರಾಕರಿಸಬೇಕಾಗುತ್ತದೆ" (ಬೃಹದಾರಣ್ಯಕೋಪನಿಷತ್ ಭಾಷ್ಯ, ೧.೨.೧) ಎಂದು ಅವರು ಹೇಳುತ್ತಾರೆ. ಆದ್ದರಿಂದ ಅವರ ಪ್ರಕಾರ ಯಾವುದೋ ಒಂದು ಭಾವವಸ್ತು ಇರಲೇಬೇಕು. ಇದನ್ನು 'ವಿವೇಕಚೂಡಾಮಣಿ'ಯಲ್ಲಿ ಅವರೇ ಹೀಗೆ ಹೇಳುತ್ತಾರೆ:

ಅಸ್ತಿ ಕಶ್ಚಿತ್ ಸ್ವಯಂ ನಿತ್ಯಂ ಅಹಂ ಪ್ರತ್ಯಯಲಂಬನಃ ।
ಅವಸ್ಥಾತ್ರಯಸಾಕ್ಷೀ ಸನ್ ಪಂಚಕೋಶವಿಲಕ್ಷಣಃ ॥
(೧೨೫)

" 'ನಾನು' ಎಂಬ ಪ್ರಜ್ಞೆಗೆ ಆಶ್ರಯವಾಗಿರುವ, ತಾನೇ ತಾನಾಗಿರುವ, ನಿತ್ಯವಾಗಿರುವ, ಅವಸ್ಥಾತ್ರಯಕ್ಕೆ ಸಾಕ್ಷಿಯಾಗಿರುವ ಮತ್ತು ಪಂಚಕೋಶಗಳಿಂದ ಬೇರೆಯಾಗಿರುವ ಯಾವದೋ ಒಂದು ಸತ್ಯ ಇದ್ದೇ ಇದೆ."

ಎಲ್ಲ ಕೋಶಗಳ, ಎಲ್ಲ ಅವಸ್ಥೆಗಳ ಸಾಕ್ಷಿಯಾಗಿ ಆತ್ಮನು ಬೆಳಗುತ್ತಿರುವನು. 'ದೃಗ್–ದೃಶ್ಯ–ವಿವೇಕ'ದ ಮೊದಲನೆಯ ಶ್ಲೋಕವು ವಿಶ್ಲೇಷಣಾತ್ಮಕವಾಗಿ ಇದನ್ನು ಹೀಗೆ ವಿವರಿಸುತ್ತದೆ:

ರೂಪಂ ದೃಶ್ಯಂ ಲೋಚನಂ ದೃಕ್
ತದ್ದೃಶ್ಯಂ ದೃಕ್ ತು ಮಾನಸಂ।
ದೃಶ್ಯಾ ಧೀವೃತ್ತಯಃ ಸಾಕ್ಷೀ
ದೃಗೇವ ನ ತು ದೃಶ್ಯತೇ॥ (೧)

"ಹೊರಗಿನ ರೂಪಗಳು ದೃಶ್ಯವಾದರೆ (ವಿಷಯ) ಕಣ್ಣು ಅವನ್ನು ನೋಡುವ ದೃಕ್ (ವಿಷಯಿ). ಅದೇ ಕಣ್ಣು ಮನಸ್ಸುಗಳಿಗೆ ವಿಷಯವಾಗುತ್ತದೆ (ಮನಸ್ಸಿನ ಮೂಲಕ ಕಣ್ಣನ್ನು ಕಲ್ಪಿಸಿಕೊಳ್ಳಬಹುದು). ಮನಸ್ಸಿನ ವೃತ್ತಿಗಳು ಸಾಕ್ಷಿಗೆ ವಿಷಯವಾಗುತ್ತವೆ. ಆದರೆ ಆ ಸಾಕ್ಷಿಯು ಯಾವಾಗಲೂ ವಿಷಯಿಯೇ, ಅದು ವಿಷಯವಾಗುವುದೇ ಇಲ್ಲ."

**ವಿಜ್ಞಾತಾರಮ್ ಅರೇ ಕೇನ ವಿಜಾನೀಯಾತ್** – "ತಿಳಿಯುವವನನ್ನೇ ತಿಳಿಯುವುದು ಹೇಗೆ?" ಎಂದು ಬೃಹದಾರಣ್ಯಕ ಉಪನಿಷತ್ತು ಪ್ರಶ್ನಿಸುತ್ತದೆ. ಒಂದು ಬೆರಳಿನ ತುದಿಯನ್ನು ಅದೇ ಬೆರಳಿನಿಂದ ಮುಟ್ಟಲಾಗದೇ ಇರುವಂತೆ ಆತ್ಮನನ್ನೂ ಜ್ಞಾನವಿಷಯವಾಗಿ ತಿಳಿಯಲಾಗುವುದಿಲ್ಲ.

ಆದರೆ, ಅಂತಃಸಾಕ್ಷಿಯಾಗಿ ಆತ್ಮನು ಎಲ್ಲರ ಅರಿವಿಗೆ ಬರುತ್ತಿರುವನು. ಆತ್ಮನ ಅರಿವಿಲ್ಲದೆ ಯಾವುದನ್ನೂ ಅರಿಯಲಾಗುವುದಿಲ್ಲ. ಮೊದಲು 'ನಾನು' ಎಂಬುದು ಇರಬೇಕು, ಅನಂತರ ಎಲ್ಲವೂ. ಈ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಜ್ಞಾತೃ ತನ್ನನ್ನು ತಾನೇ ಅರಿಯಲಾರನು. ನಾನು ಎಲ್ಲವನ್ನೂ ನೋಡುತ್ತೇನೆ. ಆದರೆ ನನ್ನನ್ನು ನಾನು ನೋಡಲಾರೆ. ಆತ್ಮ ಜ್ಞಾತೃ; ಸರ್ವೇಶ್ವರನಾದ, ನಿತ್ಯಸತ್ಯನಾದ ಅವನೇ ಈ ಪ್ರಪಂಚದ ದೃಶ್ಯಗಳಿಗೆಲ್ಲ ಕಾರಣ. ಆದರೆ ಪ್ರತಿಬಿಂಬದ ವಿನಃ ಅವನು ತನ್ನನ್ನು ತಾನೇ ನೋಡಲಾರ, ಅರಿತುಕೊಳ್ಳಲಾರ. ನೀವು ಕನ್ನಡಿಯಲ್ಲಿ ಅಲ್ಲದೆ ಬೇರೆ ಎಲ್ಲೂ ನಿಮ್ಮ ಮುಖವನ್ನು ನೋಡಿಕೊಳ್ಳಲಾರಿರಿ. ಆತ್ಮನೂ ತಾನು ಪ್ರತಿಬಿಂಬಿತವಾಗದೆ ಇದ್ದರೆ ತನ್ನನ್ನು ತಾನು ಅರಿಯಲಾರನು. ಆದಕಾರಣ ಈ ವಿಶ್ವವೆಲ್ಲ ತನ್ನನ್ನು ತಾನು ಅರಿಯಲು ಪ್ರಯತ್ನಿಸುತ್ತಿರುವ ಆತ್ಮವೇ ಆಗಿದೆ. ಈ ಪ್ರತಿಬಿಂಬ ಮೊದಲು ಪ್ರೋಟೋಪ್ಲಾಸಂನಲ್ಲಿ ಕಾಣುವುದು. ಅನಂತರ ಗಿಡಮರ ಪ್ರಾಣಿಗಳು ಇವುಗಳಲ್ಲಿ. ಹೀಗೆ ಕೊನೆಗೆ ಪೂರ್ಣಾತ್ಮನೆಂಬ ಶ್ರೇಷ್ಠ ಪ್ರತಿಬಿಂಬವನ್ನು ಮುಟ್ಟುವವರೆಗೆ ಇದು ಮುಂದುವರಿಯುತ್ತ, ಉತ್ತಮ ಉತ್ತಮತರ ಪ್ರತಿಬಿಂಬಗಳನ್ನು ಹೊರಗೆಡಹುತ್ತ ಹೋಗುವುದು. ಒಬ್ಬನು ತನ್ನ ಪ್ರತಿಬಿಂಬವನ್ನು ಮೊದಲು ಬಗ್ಗಡದ ನೀರಿರುವ ಗುಂಡಿಯಲ್ಲಿ ನೋಡಿದಂತೆ ಇರುವುದು. ಅಲ್ಲಿ ಕೇವಲ ಅವನ ರೂಪುರೇಖೆ ಮಾತ್ರ ಕಾಣುತ್ತದೆ. ಅನಂತರ ಶುಭ್ರವಾದ ನೀರಿಗೆ ಬಂದರೆ ಅಲ್ಲಿ ಶುಭ್ರವಾದ ಪ್ರತಿಬಿಂಬವನ್ನು ಅವನು ಕಾಣುತ್ತಾನೆ. ಅನಂತರ ಹೊಳೆಯುತ್ತಿರುವ ಲೋಹದಲ್ಲಿ ನೋಡಿದಾಗ ಅವನ ಪ್ರತಿಬಿಂಬ ಇನ್ನೂ ಸ್ಪಷ್ಟವಾಗುತ್ತದೆ. ಕೊನೆಯಲ್ಲಿ ಕನ್ನಡಿಯಲ್ಲಿ ನೋಡಿದಾಗ ತಾನು ನಿಜವಾಗಿ ಹೇಗೆ ಇರುವನೊ ಹಾಗೆಯೇ ಅವನು ಕಾಣುತ್ತಾನೆ" (ಕೃತಿಶ್ರೇಣಿ, ೬:೨೫೨).

ದೀಪವು ಎಲ್ಲವನ್ನೂ ಬೆಳಗುತ್ತದೆ, ಆದರೆ ಅದನ್ನು ಬೆಳಗುವುದಕ್ಕೆ ಯಾವ ದೀಪವೂ ಬೇಕಾಗುವುದಿಲ್ಲ. ಹಾಗೆಯೇ ಆತ್ಮನು ಎಲ್ಲವನ್ನೂ ಅರಿಯುತ್ತಾನೆ ಮತ್ತು ಅದರ ಮೂಲಕ ತನ್ನನ್ನು ತಾನೇ ಅರಿಯುತ್ತಾನೆ – ಜ್ಞಾನವಸ್ತುವಾಗಿ ಅಲ್ಲ, ಸ್ವ–ಪ್ರಜ್ಞೆಯಾಗಿ. ಆತ್ಮನು ಸಾಕ್ಷಿಯಾಗಿ ಎಲ್ಲವನ್ನೂ ಬೆಳಗುತ್ತಿರುವನು ಎಂಬುದನ್ನು ಸೂಕ್ತವಾದ ಒಂದು ರೂಪಕದ ಮೂಲಕ 'ಪಂಚದಶಿ'ಯಲ್ಲಿ ಹೀಗೆ ವಿವರಿಸಲಾಗಿದೆ :

ಅಹಂಕಾರಃ ಪ್ರಭುಃ ಸಭ್ಯಾ ವಿಷಯಾ ನರ್ತಕೀ ಮತಿಃ।
ತಾಲಾದಿಧಾರಿಣ್ಯಕ್ಷಾನಿ ದೀಪಃ ಸಾಕ್ಷ್ಯವಭಾಸಕಃ ॥
(೧೦.೧೪)

"ಒಂದು ರಾಜಸಭೆ. ರಾಜನು ಸಿಂಹಾಸನದ ಮೇಲೆ